# ಆಹಾ ಸುದ್ದಿ!

★ ಸಸಿತೋಟ




ಹೈವೇ ಪಕ್ಕ ಈ ಹೈದೆಯ ಹೊಯ್ದಾಟ ನೋಡಿ. 'ಪೋಲ್ ಡಾನ್ಸ್' ಮಾಡಲು ರಸ್ತೆ ಪಕ್ಕ ಹಾಕಿರುವ ವೇಗಮಿತಿಯ ಕಂಬವೇ ಬೇಕಿತ್ತೇ ಈಕೆಗೆ! ಮೆಕ್ಸಿಕೋದಲ್ಲಿ ಈಚೆಗೆ ನಡೆದ 'ಅರ್ಬನ್ ಪೋಲ್ ಡಾನ್ಸ್' ಆಚರಣೆಯಲ್ಲಿ ಸಂಭ್ರಮಿಸಲು ಈಕೆಗೆ ಕಂಡಿದ್ದು ಈ ಕಂಬ. ಬೆಂಗಳೂರಲ್ಲಿ ಈ ಕಸರತ್ತು ನಡೆಸಿದ್ದರೆ, ನೋಡುಗರಿಗೆ ವಿದ್ಯುತ್ ಆಘಾತವಾಗುವುದರ ಜೊತೆಗೆ ಈಕೆಯನ್ನು ಕಂಬದಿಂದ ಬೇರ್ಪಡಿಸಲು ಬೆಸ್ಕಾಂನವರು, ಆಸ್ಪತ್ರೆಯವರು ಒಟ್ಟೊಟ್ಟಿಗೇ ಬರಬೇಕಿತ್ತು!

ವಿದೇಶಗಳಲ್ಲಿ ಮೇಳಗಳೆಂದರೆ ಕುಣಿದು ಕುಪ್ಪಳಿಸುವ ಸಂದರ್ಭ. ಎಲ್ಲಾ ಪ್ರಾಣಿ, ಪಕ್ಷಿಗಳ ಹೆಸರಲ್ಲಿ ಮೇಳಗಳಾದವು. ಈಗ ಯಕಃಶ್ಚಿತ 'ಸೊಳ್ಳೆ ಮೇಳ'ವನ್ನು ರಷ್ಯಾದ ಯುಸೊಲ್ಯೆದಲ್ಲಿ ಜುಲೈನಲ್ಲಿ ಏರ್ಪಡಿಸಲಾಗಿದೆಯಂತೆ. ಸೊಳ್ಳೆ ಹಿಡಿಯುವ ಸ್ಪರ್ಧೆಯ ಜೊತೆಗೆ ವಿಶೇಷ ಆಕರ್ಷಣೆ 'ಅತ್ಯಂತ ರುಚಿಕರ ಹುಡುಗಿ' ಸ್ಪರ್ಧೆ. ಸೊಳ್ಳೆಗಳಿಂದ ಹೆಚ್ಚು ಕಡಿಸಿಕೊಳ್ಳುವ ರುಚಿಕರ ರಕ್ತದ ಹುಡುಗಿ ಇರಬಹುದೇ!

ವಾಷಿಂಗ್ಟನ್ನಿನ ಕ್ಯಾಪಿಟಲ್ ಕಟ್ಟಡದ ಬಳಿ ಇದೇನಿದು ತಲೆಬುರುಡೆ, ಮೂಳೆಗಳ ರಾಶಿ! ಅದೂ 10 ಲಕ್ಷ ಮೂಳೆಗಳು! ಕಲಾವಿದೆ ನವೋಮಿ ಭೀತಿಯನ್ನು ಬೇರೆಯವರಿಗೆ ಈ ರೀತಿ ಅಂಟಿಸಬಾರದಿತ್ತು. ಕಾಗದ, ಮೆದುಗಾರೆಯಿಂದ ಮಾಡಿದ ಮೂಳೆಗಳನ್ನು ಹರಡಲಿಕ್ಕೆಂದೇ ನೂರಾರು ಜನರನ್ನು ಕಲೆ ಹಾಕಿದ್ದಳು ಈ ಕಲಾವಿದೆ. ಮೂಳೆ ತೆಗೆದು ಹಾಕಲು ಎಷ್ಟು ಮಂದಿಯನ್ನು ಕಲೆ ಹಾಕಿದರೋ ನಗರಾಡಳಿತದವರು!




ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಅಂತಿಮ ಪರೀಕ್ಷೆ ಮುಗಿಯಿತೆಂದರೆ ಸ್ವರ್ಗಕ್ಕೆ ಮೂರೇ ಗೇಣು. ಆದರೆ ಮುಗಿದ ತಕ್ಷಣ ಮಾತ್ರ ನರಕಕ್ಕೆ ಗೇಣು ಹಾಕಿ ಅಳೆಯುವ ಅವಶ್ಯಕತೆಯೇ ಇಲ್ಲ. ಪರೀಕ್ಷೆ ಮುಗಿಸಿದವರ ಮೇಲೆ ಇತರ ವಿದ್ಯಾರ್ಥಿಗಳು ಮೊಟ್ಟೆ, ಹಳಸಿದ ಆಹಾರ, ಶೇವಿಂಗ್ ಕ್ರೀಮ್, ಷಾಂಪೇನ್ ಎಲ್ಲವನ್ನೂ ಎಸೆದು ಸಂಭ್ರಮ ಆಚರಿಸುವ ಸಂಪ್ರದಾಯವಿದೆಯಂತೆ. ಇದಕ್ಕೆ 'ಟ್ರ್ಯಾಷಿಂಗ್' ಎಂಬ ಗೌರವದ ಪದ ಬೇರೆ. 'ಟ್ರಾಷ್' ಎಂದರೆ ಕಸ, ನಿಷ್ಪ್ರಯೋಜಕ ಎಂಬ ಅರ್ಥವೂ ಇದೆಯಲ್ಲ!



ಜರ್ಮನಿಯಲ್ಲಿ ಕಳೆದ ವರ್ಷ ವ್ಯಾನನ್ನು ಕದ್ದ ಮೂವರಿಗೆ 4 ವರ್ಷ ಜೈಲು ಶಿಕ್ಷೆ ವಿಧಿಸಲಾಯ್ತು. ವಿಶೇಷವೇನಿದೆ ಕಳ್ಳರಿಗೆ ಶಿಕ್ಷೆ ವಿಧಿಸುವುದರಲ್ಲಿ? ಕಳ್ಳರಲ್ಲಿ ವಿಶೇಷವಿಲ್ಲ, ಅವರು ಕದ್ದ ವ್ಯಾನೂ ವಿಶೇಷವಲ್ಲ. ವ್ಯಾನಿನೊಳಗೆ ವಿಶೇಷವಿತ್ತು. 12 ಹೆಣಗಳಿರುವ ವ್ಯಾನನ್ನು ಸ್ಮಶಾನಕ್ಕೆ ಒಯ್ಯಲಾಗುತ್ತಿತ್ತು. ರಸ್ತೆಯ ಪಕ್ಕ ವ್ಯಾನ್ ನಿಲ್ಲಿಸಿ ಕೈ ತೊಳೆಯುತ್ತಿದ್ದ ಚಾಲಕನ ಕಣ್ಣು ತಪ್ಪಿಸಿ ಈ ವ್ಯಾನನ್ನು ಕದ್ದ ಕಳ್ಳರು ಹೆಣ ನೋಡಿ ಮತ್ತೆಲ್ಲೋ ವ್ಯಾನ್ ನಿಲ್ಲಿಸಿ ಓಡಿದ್ದರಂತೆ. ನೀತಿ: ವಾಹನ ಕದಿಯುವ ಮುನ್ನ ಒಳಗೇನಿದೆ ಎಂದು ನೋಡಿಕೊಳ್ಳಬೇಕು.



| Name | LALU RAM MEENA | | | | | Sex | MALE |
|---|---|---|---|---|---|---|---|
| Roll No. | 2201000509 | Cat | ST | DOB | 05/10/1987 | Ticket / Seat No | 1028441 |
| Date 09/06/2013 (SUNDAY) | Time. 10:00 AM to 12:00 Noon | Paper- I (OBJECTIVE TYPE) | (i) General Intelligence & Reasoning (ii) General Awareness (iii) General Engineering PART-B (ELECTRICAL) | | | | |
| Reporting Time 09:20 AM | Time. 02:00 PM to 04:00 PM | Paper- II ( CONVENTIONAL TYPE ) | General Engineering PART-B (ELECTRICAL) | | | | |

Exam Centre's Address
GOVT BOYS SR SEC SCHOOL NO 3
BADARPUR
NEAR TUGLAKABAD METRO STATION
NEW DELHI-110044

Candidates MUST carry four passport size photographs and at least one photo bearing IDENTITY PROOF in original such as Driving License,Voter Card ,Adhar

ಇದು ಸ್ಟಾಫ್ ಸಿಲೆಕ್ಷನ್ ಕಮೀಷನ್ ಪರೀಕ್ಷಾ ಪ್ರವೇಶ ಪತ್ರ. ಅಮೆರಿಕದ ಅಧ್ಯಕ್ಷ ಒಬಾಮರಿಗೆ ಭಾರತದಲ್ಲಿ ಉದ್ಯೋಗ ಯಾಕೆ ಬೇಕಿತ್ತೋ? ಜೈಪುರ ಸಮೀಪದ ದೌಸಾದ ಲಾಲುರಾಂ ಮೀನಾಗೆ ಬಂದ ಪ್ರವೇಶ ಪತ್ರದಲ್ಲಿ ಒಬಾಮ ಫೋಟೊ ಇತ್ತು. ತಾನ್ಯಾವಾಗ ಒಬಾಮ ಆದೆ ಎಂದು ಲಾಲುರಾಂ ಕನ್ನಡಿ ನೋಡಿಕೊಂಡು ತಲೆ ಕೆಡಿಸಿಕೊಂಡಿದ್ದೇ ಬಂತು. ಒಬಾಮರನ್ನೇ ತನ್ನ ಬದಲು ಪರೀಕ್ಷೆಗೆ ಕೂಡಿಸಬಹುದಿತ್ತೇನೋ ಎಂದು ಹಳಹಳಿಸಿರಲೂಬಹುದು. ಆದರೆ ಪ್ರವೇಶ ಪತ್ರಕ್ಕೆ ಸಹಿ ಹಾಕಿದ ಅಧಿಕಾರಿಗಳು ಮಾತ್ರ ಅಮೆರಿಕದ ಅಧ್ಯಕ್ಷರೂ ನಮ್ಮಿಂದಲೇ ನೇಮಕಾತಿ ಬಯಸಿದ್ದಾರೆ ಎಂದು ಬೀಗಿರಬಹುದೇನೋ!